(ಇಂದು ದಿನಾಂಕ:13-08-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಶ್ರೀ ಎಸ್ ಬಿ ಅರ್ಜಿದಾರ ಪರ ವಕೀಲರಿಂದ :-**

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.8 ಮತ್ತು 9 | ಎರಡು ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳು |

**ಪಾಟೀ ಸವಾಲುಃ ಎದುರುದಾರ ನಂ.3 ರವರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ.**

1. ನಾನು ಏನೂ ಕೆಲಸ ಮಾಡುವುದಿಲ್ಲ. ನಾನು ನನ್ನ ತಂದೆ-ತಾಯಿಯವರ ಮನೆಯಲ್ಲಿ ಇರುತ್ತೇನೆ. ನಾನು ನಮ್ಮ ಅತ್ತೆ ಮಾವನವರ ಜೊತೆ ಇರುವುದಿಲ್ಲ. ಮೃತ ನನ್ನ ಗಂಡ ಮಹಮ್ಮದ್ ಲಾರಿ ಸಂಖ್ಯೆ ಕೆಎ 36 ಸಿ 7382 ನೇದ್ದರಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದರು. ಮೃತ ನನ್ನ ಗಂಡ ಮಹಮ್ಮದ್ ಲಾರಿ ಸಂಖ್ಯೆ ಕೆಎ 36 ಸಿ 7382 ನೇದ್ದರಲ್ಲಿ ಕ್ಲೀನರ್ ಆಗಿ ಕೆಲಸ ಮಾಡುತ್ತಿದ್ದರಿಂದ ಕಾರ್ಮಿಕರ ಪರಿಹಾರ ಕಾಯ್ದೆ ಅಡಿಯಲ್ಲಿ ಅರ್ಜಿ ಸಲ್ಲಿಸಬೇಕಾಗುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಮೃತ ನನ್ನ ಗಂಡ ಮಹಮ್ಮದ್ ಮತ್ತು ಎದುರುದಾರ ನಂ. 2 ರ ನಡುವೆ ಕಾರ್ಮಿಕ ಮತ್ತು ಮಾಲೀಕರ ಸಂಬಂಧ ಇತ್ತು ಎಂದರೆ ಸರಿ. ಲಾರಿ ಮಾಲೀಕರು ನನ್ನ ಗಂಡ ಮಹಮ್ಮದ್ ರವರಿಗೆ ತಿಂಗಳಿಗೆ ರೂ.24 ಸಾವಿರ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ.
2. ಅಪಘಾತದ ದಿನ ಮೃತ ನನ್ನ ಗಂಡ ಮಹಮ್ಮದ್ ಅನಂತಪುರನಿಂದ ರಾಯಚೂರಗೆ ಬರುತ್ತಿದ್ದರು. ಮೃತ ನನ್ನ ಗಂಡ ಮಹಮ್ಮದ್ ರವರು ವೈಯಕ್ತಿಕ ಕೆಲಸದ ಮೇಲೆ ಅನಂತಪುರಗೆ ಹೋಗಿದ್ದರು ಎಂದರೆ ಸರಿಯಲ್ಲ. ಮೃತ ನನ್ನ ಗಂಡ ಮಹಮ್ಮದ್ ರವರು ಅನಧಿಕೃತ ಪ್ರಯಾಣಿಕರಾಗಿ

ಅನಂತಪುರದಿಂದ ಸದರಿ ಲಾರಿಯಲ್ಲಿ ಬರುತ್ತಿದ್ದರು ಎಂದರೆ ಸರಿಯಲ್ಲ. ಮೃತ ನನ್ನ ಗಂಡ ಮಹಮ್ಮದ್ ರವರು ದ್ವಿತೀಯ ಪಿಯುಸಿ ಓದಿರುತ್ತಾರೆ. ಮೃತ ನನ್ನ ಗಂಡ ಮಹಮ್ಮದ್ ರವರು ಅವರ ತಂದೆ ತಾಯಿಯವರೊಂದಿಗೆ ವಾಸ ಇದ್ದರು ಎಂದರೆ ಸರಿಯಲ್ಲ. ಮೃತ ನನ್ನ ಗಂಡ ಮಹಮ್ಮದ್ ರವರ ಶವಸಂಸ್ಕಾರಕ್ಕೆ ರೂ.2 ಲಕ್ಷ ಖರ್ಚಾಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರ ನಂ.1 ರವರ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಬೇರೆ ವಾಹನದ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

3. ನನಗೆ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದಂತೆ ಬೇರೊಂದು ವಾಹನದಿಂದ ಅಪಘಾತವಾಗಿದೆ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರ ನಂ.2 ಇವರು ತಮ್ಮ ಲಾರಿಗೆ ಪ್ರಯಾಣಿಕರಿಗೆ ಮತ್ತು ಕ್ಲೀನರ್ ಗೆ ಯಾವುದೇ ಪ್ರಿಮಿಯಮ್ ಪಾವತಿ ಮಾಡಿರುವುದಿಲ್ಲ, ಕಾರಣ ಎದುರುದಾರ ನಂ.3 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

4. ಎದುರುದಾರರ ನಂ.1 ಇವರಿಗೆ ಸೂಕ್ತವಾದ ಚಾಲನಾ ಪತ್ರ ಹೊಂದಿರುವುದಿಲ್ಲ ಮತ್ತು ಎದುರುದಾರ ನಂ.1 ಮತ್ತು 2 ರವರು ಮೋ.ವಾ. ಕಾಯ್ದೆ ಮತ್ತು ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿದ ಕಾರಣ ಎದುರುದಾರ ನಂ.3 ಇವರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಎದುರುದಾರ ನಂ.4 ಮತ್ತು 5 ರವರ ಪರ ಶ್ರೀ ಎಮ್ ಎ ಎನ್ ವಕೀಲರಿಂದ.**

5. ಮೃತ ನನ್ನ ಗಂಡ ಮಹಮ್ಮದ್ ರವರು ಅವರ ತಂದೆ ತಾಯಿಯವರ ಮೇಲೆ ಜಾಸ್ತಿ ಪ್ರೀತಿ ಇತ್ತು ಮತ್ತು ಅವರ ಮೇಲೆಯೇ ಅವಲಂಬಿತರಾಗಿದ್ದರು ಎಂದರೆ ಸರಿಯಲ್ಲ. ಮೃತ ನನ್ನ ಗಂಡ ಮಹಮ್ಮದ್ ರವರು ಅವರ ತಂದೆ ತಾಯಿಯವರ ಔಷಧ ಉಪಚಾರ ಮಾಡುತ್ತಿದ್ದರು ಎಂದರೆ

ಸರಿಯಲ್ಲ. ಮೃತ ನನ್ನ ಗಂಡ ಮಹಮ್ಮದ್ ರವರು ಅವರ ತಂದೆ ತಾಯಿಯವರ ಜಮೀನುಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರ ನಂ.4 ಮತ್ತು 5 ರವರು ಕೂಡಾ ಸಮನಾದ ಪರಿಹಾರ ಪಡೆಯಲು ಅರ್ಹರು ಎಂದರೆ ಸರಿಯಲ್ಲ. ಮೃತ ನನ್ನ ಗಂಡ ಮಹಮ್ಮದ್ ರವರು ಜಮೀನಿನ ಆದಾಯವನ್ನು ಅವರ ತಂದೆ ತಾಯಿಯವರ ಔಷಧ ಉಪಚಾರಕ್ಕಾಗಿ ಖರ್ಚು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮೃತ ನನ್ನ ಗಂಡ ಮಹಮ್ಮದ್ ಅವರ ತಂದೆ ತಾಯಿಯವರ ಹೆಸರಲ್ಲಿ ಇದ್ದ ಜಮೀನುಗಳು ಒಣಬೇಸಾಯದ ಜಮೀನುಗಳು ಎಂದರೆ ಸರಿಯಲ್ಲ. ಹತ್ತಿ ಬೆಳೆಯುತ್ತಾರೆ ಅಂತಾ ಸಾಕ್ಷಿ ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು